# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## <u>ಅಧಿಸೂಚನೆ</u>

**ಸಂಖ್ಯೆ: ಕವಿಪ್ರನಿನಿ/ಬಿ16/3281/2014-15** **ದಿನಾಂಕ: 28.08.2015**

ವಿಷಯ: ಕಿರಿಯ ಸ್ಟೇಷನ್ ಪರಿಚಾರಕ ಹಾಗೂ ಕಿರಿಯ ಮಾರ್ಗದಾಳು ಹುದ್ದೆಗಳ ನೇಮಕಾತಿ ಕುರಿತು.

ಉಲ್ಲೇಖ:
1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/3281/2014-15, ದಿನಾಂಕ: 12.06.2015.
2. ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/3281/2014-15 ದಿನಾಂಕ: 17.07.2015.
3. ನಿಗಮದ ದಿನಾಂಕ: 24.08.2015 ರ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/3281/2014-15.

*****

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಹಾಗೂ ಬೆವಿಕಂ/ಗುವಿಸಕಂನಿ/ಮವಿಸಕಂನಿ/ಹುವಿಸಕಂನಿ/ಚಾವಿಸನಿನಿ ಯಲ್ಲಿ ಕಿರಿಯ ಮಾರ್ಗದಾಳು ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಪ್ರಕಟಿಸಿದ ಹುದ್ದೆಗಳಿಗೆ ಶೈಕ್ಷಣಿಯ ವಿದ್ಯಾರ್ಹತೆಯಲ್ಲಿ (ಎಸ್ಎಸ್ಎಲ್ಸಿ/10 ನೇ ತರಗತಿ) ಗಳಿಸಿರುವ ಅಂಕಗಳ ಅರ್ಹತೆಯ ಆಧಾರದ ಮೇಲೆ 1:5 ರ ಅನುಪಾತದಲ್ಲಿ ದಿನಾಂಕ: 03.09.2015 ರಿಂದ ನಡೆಸಲಾಗುವ ಸಹನಾ ಶಕ್ತಿ ಪರೀಕ್ಷೆಗೆ ಆಯ್ಕೆಯಾದ ಅಭ್ಯರ್ಥಿಗಳ . ಹೆಸರುಗಳನ್ನು ಪ್ರಕಟಿಸಲಾಗಿರುತ್ತದೆ.

ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವಾಗ ಹಲವಾರು ಅಭ್ಯರ್ಥಿಗಳು ಗಳಿಸಿರುವ ಅಂಕ ಹಾಗೂ ಪಡೆದ ಅಂಕಗಳನ್ನು ಸಮನಾಗಿ ನಮೂದಿಸಿರುತ್ತಾರೆ. ಅಂದರೆ ಗಳಿಸಿದ ಮತ್ತು ಪಡೆದ ಅಂಕಗಳು ಶೇಕಡ 100 ಎಂದು ತಪ್ಪಾಗಿ ನಮೂದಿಸಿರುತ್ತಾರೆ. ಈ ರೀತಿ ತಪ್ಪಾಗಿ ಅಂಕಗಳನ್ನು ಭರ್ತಿ ಮಾಡಿರುವುದರಿಂದ, ಮೂಲ ಅಂಕಪಟ್ಟಿಗಳನ್ನು ಸಹನಾ ಶಕ್ತಿ ಪರೀಕ್ಷೆಯ ದಿನದಂದು ಪರಿಶೀಲಿಸಿದ ನಂತರ, ಸದರಿಯವರುಗಳ ಶೇಕಡವಾರು ಅಂಕವು ನಿಗಧಿಪಡಿಸಿದ ಕ್ಯಾಟಗರಿಯ ಕಟ್ ಆಫ್‌ಗಿಂತ(Cut-off) ಹೆಚ್ಚಿಗೆ ಇದ್ದಲ್ಲಿ ಮಾತ್ರ ಸಹನಾ ಶಕ್ತಿ ಪರೀಕ್ಷೆಗೆ ಪರಿಗಣಿಸಲಾಗುವುದು. ಆದರೆ ಒಂದು ವೇಳೆ ಸದರಿ ಅಭ್ಯರ್ಥಿಗಳ ಶೇಕಡವಾರು ಅಂಕವು ನಿಗಧಿಪಡಿಸಿದ ಕಟ್ ಆಫ್‌ಗಿಂತ ಕಡಿಮೆ ಇದ್ದಲ್ಲಿ, ಸಹನಾ ಶಕ್ತಿ ಪರೀಕ್ಷೆಗೆ ಪರಿಗಣಿಸುವುದಿಲ್ಲ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು.